# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-4517/2014/ಡಿಆರ್ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 08/02/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಪಿ.ಬಿ.ರಸ್ತೆ, ದಾವಣಗೆರೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಮಣಿಕಂಠ ಕೆ ಬಿನ್ ಕರುಣಾಕರನ್, ಜಿಲ್ಲಾಧ್ಯಕ್ಷರು, ಶ್ರೀರಾಮಸೇನೆ, 4ನೇ ಮೇನ್, 1ನೇ ಕ್ರಾಸ್, ವಿನೋಬಾನಗರ, ದಾವಣಗೆರೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ.ಜಿ.ಎಂ.ಗುಡ್ಡಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಪಿ.ಬಿ.ರಸ್ತೆ, ದಾವಣಗೆರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಸರ್ಕಾರದಿಂದ ಅನುಷ್ಠಾನಗೊಳಿಸಿರುವ ಸರ್ಕಾರದ ವಿವಿಧ ಯೋಜನೆಗಳಲ್ಲಿ ಎದುರುದಾರರು ಕಳಪೆ ಮಟ್ಟ ಕಾಮಗಾರಿಗಳನ್ನುಜ ಕೈಗೊಂಡು ಅಕ್ರಮ ಆಸ್ತಿ ಹೊಂದಿದ್ದು, ಅವರ ಸ್ನೇಹಿತರು ಹಾಗೂ ಕುಟುಂಬದ ಸದಸ್ಯರ ಹೆಸರಿನಲ್ಲಿ ಅಕ್ರಮ ಆಸ್ತಿಯನ್ನು ಹೊಂದಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಎದುರುದಾರರು ತಮ್ಮ ಸರ್ಕಾರಿ ಸೇವಾವಧಿಯಲ್ಲಿ ಗಳಿಸಿರುವ ಅಂದಾಜು ಆಸ್ತಿ ರೂ.31,34,260/-, ಮಾಡಿರಬಹುದಾದ ಅಂದಾಜು ವೆಚ್ಚ ರೂ.23,29,860/-. ಅವರ ಒಟ್ಟು ಆಸ್ತಿ ಮತ್ತು ವೆಚ್ಚ ರೂ.54,64,120/-. ಅವರು ಗಳಿಸಿರಬಹುದಾದ ಅಂದಾಜು ಆದಾಯ ರೂ.55,50,000/- ಆಗಿರುತ್ತದೆ. ಸದರಿಯವರ ಅಸಮತೋಲನ ಆಸ್ತಿ ರೂ.85,88/- ಆಗಿದ್ದು, ಶೇಕಡಾವಾರು -01.54 ಆಗಿರುತ್ತದೆ. ಸಧ್ಯಕ್ಕೆ ಇದೊಂದು ಉತ್ತಮವಾದ ಅಸಮತೋಲನ ಆಸ್ತಿ ಗಳಿಕೆ ಪ್ರಕರಣವಾಗಿ ದೃಢಪಟ್ಟಿರುವುದಿಲ್ಲವೆಂದು ಹೇಳಿರುತ್ತಾರೆ.

4) ಪೊಲೀಸ್ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಅವರ ಹೆಸರಿನಲ್ಲಿ, ತಂದೆ ತಾಯಿಯ ಹೆಸರಿನಲ್ಲಿ ಮತ್ತು ಹೆಂಡತಿಯ ಹೆಸರಿನಲ್ಲಿ ಜಮೀನುಗಳನ್ನು ಖರೀದಿಸಿರುವುದು ಕಂಡುಬರುತ್ತದೆ. ಆದ್ದರಿಂದ, ತನಿಖಾಧಿಕಾರಿಯ ವರದಿಯನ್ನು ಎದುರುದಾರರಿಗೆ ಕಳುಹಿಸಿ, ವರದಿಯಲ್ಲಿ ನಮೂದಿಸಿರುವ ಜಮೀನುಗಳನ್ನು ಖರೀದಿಸಲು ಇಲಾಖಾ ಅನುಮತಿಯನ್ನು ಪಡೆಯಲಾಗಿದೆಯೇ ಎನ್ನುವ ಬಗ್ಗೆ ಹಾಗೂ ಯಾವ ಆದಾಯದಿಂದ ಎದುರುದಾರರು ಅವರ ತಂದೆ ತಾಯಿ ಹಾಗೂ ಪತ್ನಿ ಸದರಿ ಜಮೀನುಗಳನ್ನು ಖರೀದಿಸಿರುತ್ತಾರೆನ್ನುವ ಬಗ್ಗೆ ವಿವರಣೆ ನೀಡುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು.

5) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಅವರು ದಿ.20/7/1983 ರಲ್ಲಿ ಜೂನಿಯರ್ ಇಂಜಿನಿಯರ್ ಆಗಿ ನೇಮಕ ಹೊಂದಿ 2004 ರಲ್ಲಿ ಸಹಾಯಕ ಇಂಜಿನಿಯರ್ ಆಗಿ ಬಡ್ತಿ ಹೊಂದಿರುತ್ತಾರೆ. ರಿ.ಸ.ನಂ.33/5 ಪಿತ್ರಾರ್ಜಿತ ಜಮೀನಾಗಿದ್ದು, 1983–84 ರಲ್ಲಿ ಅವರ ತಂದೆ ಮಲ್ಲಪ್ಪ ರವರಿಂದ ವರ್ಗಾವಣೆಯಾಗಿ ಬಂದಿದ್ದು, ದಿ.27/8/2005 ರಲ್ಲಿ ಅವರ ತಾಯಿಯ ಹೆಸರಿಗೆ ವರ್ಗಾವಣೆಯಾಗಿ ದಿ.8/7/13 ರಲ್ಲಿ ಪಾಲು ವಿಭಾಗದ ಮೂಲಕ ಎದುರುದಾರರ ಹೆಸರಿಗೆ ಬಂದಿರುತ್ತದೆ. ರಿ.ಸ.ನಂ.31/2 ರ ಜಮೀನನ್ನು ಎದುರುದಾರರ ತಂದೆಯವರು ದಿ.3/2/2005 ರಲ್ಲಿ ರೂ.1,17,300/– ಕ್ಕೆ ಕೃಷಿ ಆದಾಯದಿಂದ ಖರೀದಿಸಿರುತ್ತಾರೆ. ಪಾಲು ವಿಭಾಗದ ಪ್ರಕಾರ ಸದರಿ ಸ್ವತ್ತನ್ನ ಎದುರುದಾರರಿಗೆ ವರ್ಗಾಯಿಸಿರುತ್ತಾರೆ. ರಿ.ಸ.ನಂ.39/131 ಸ್ವತ್ತನ್ನು ದಿ.13/5/2005 ರಲ್ಲಿ ಎದುರುದಾರರ ತಾಯಿಯಾದ ದುರುಗಮ್ಮ ರೂ.1,35,900/– ಕ್ಕೆ ಕೃಷಿ ಆದಾಯದಿಂದ ಖರೀದಿಸಿರುತ್ತಾರೆ. ನಂತರ ಪಾಲು ವಿಭಾದ ಪ್ರಕಾರ ದಿ.8/7/13 ರಲ್ಲಿ ದೂರುದಾರರಿಗೆ ವರ್ಗಾವಣೆ ಮಾಡಿರುತ್ತಾರೆ. ರಿ.ಸ.ನಂ.33/1 ರಲ್ಲಿ ಜಮೀನನ್ನು ದಿ.27/8/2005 ರಲ್ಲಿ ಎದುರುದಾರರ ತಾಯಿಯಾದ ದುರುಗಮ್ಮ ಇವರು ರೂ.74,190/– ಕ್ಕೆ ಕೃಷಿ ಆದಾಯದಿಂದ ಖರೀದಿಸಿರುತ್ತಾರೆ. ರಿ.ಸ.ನಂ.39/1 ಮತ್ತು ರಿ.ಸ.ನಂ.39/9 ರಲ್ಲಿ ಎದುರುದಾರರ ಪತ್ನಿಯ ಹೆಸರಿನಲ್ಲಿ ಕೃಷಿ ಆದಾಯದಿಂದ, ಗೃಹಕೃತ್ಯದ ಉಳಿತಾಯದಿಂದ ಮತ್ತು ವೇತನದ ಉಳಿತಾಯದಿಂದ ಖರೀದಿಸಿರುತ್ತಾರೆ. ಆ ಬಗ್ಗೆ ಆಸ್ತಿ ಮತ್ತು ನಿರ್ವಹಣೆ ಪಟ್ಟಿಯಲ್ಲಿ ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಬಿಟ್ಟು ಅವರ ಹೆಸರಿಗೆ ಯಾವುದೇ ಚಿರಾಸ್ತಿಗಳನ್ನು ಖರೀದಿಸಿರುವುದಿಲ್ಲವೆಂದು ಹೇಳಿರುತ್ತಾರೆ.

6) ಎದುರುದಾರರು ತನ್ನ ಆಕ್ಷೇಪಣೆಯ ಜೊತೆ ಸ್ವತ್ತುಗಳನ್ನು ಖರೀದಿ ಮಾಡಿದ ಬಗ್ಗೆ ಕ್ರಯಪತ್ರಗಳ ಪ್ರತಿ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ ಇವರು ನೀಡಿರುವ ಲೆಕ್ಕ ತೀರಿಸುವ ಪಟ್ಟಿಯ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ.

7) ತನಿಖಾಧಿಕಾರಿಯ ವರದಿಯಲ್ಲಿ ಎದುರುದಾರರು ತಮ್ಮ ಹೆಸರಿನಲ್ಲಿ ದಿ.7/9/2007 ರಂದು ದಾವಣಗೆರೆ ಕಸಬಾ ಶಾಮನೂರು ವಿಭಾಗದ ವಿದ್ಯಾನಗರ ಕ್ರಾಸ್‌ನಲ್ಲಿ ರೂ.3,60,000/–

ನಿವೇಶನವನ್ನು ಹಾಗೂ ಸದರಿ ನಿವೇಶನದಲ್ಲಿ ಒಂದು ಮನೆಯನ್ನು ನಿರ್ಮಾಣ ಮಾಡಿರುತ್ತಾರೆಂದು ಹೇಳಿರುತ್ತಾರೆ. ಸದರಿ ನಿವೇಶನವನ್ನು ಖರೀದಿಸಿರುವ ಬಗ್ಗೆ ಮತ್ತು ಅದನ್ನು ಖರೀದಿಸಲು ಇಲಾಖಾ ಅನುಮತಿ ಪಡೆದಿರುವ ಬಗ್ಗೆ ಮತ್ತು ಸದರಿ ಜಮೀನು ಖರೀದಿಸಿದ ಬಗ್ಗೆ ಇಲಾಖೆಗೆ ವರದಿಯನ್ನು ನೀಡಿರುವ ಬಗ್ಗೆ ಎದುರುದಾರರು ಯಾವುದೇ ವಿಚಾರವನ್ನು ತನ್ನ ಆಕ್ಷೇಪಣೆಯಲ್ಲಿ ತಿಳಿಸಿರುವುದಿಲ್ಲ. ಯಾವುದೇ ಆಸ್ತಿಯನ್ನು ಖರೀದಿಸುವಾಗ ಸದರಿ ಆಸ್ತಿಯನ್ನು ಖರೀದಿಸಲು ಅಥವಾ ಮನೆಯನ್ನು ಕಟ್ಟಲು ಯಾವ ಆದಾಯದ ಮೂಲದಿಂದ ಹಣವನ್ನು ಹೊಂದಿಸಲಾಗಿದೆ ಎನ್ನುವುದನ್ನು ಎದುರುದಾರರು ತಿಳಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಎದುರುದಾರರು ಅವರ ಹೆಸರಿನಲ್ಲಿ ಮತ್ತು ಅವರ ಹೆಂಡತಿಯ ಹೆಸರಿನಲ್ಲಿ ಜಮೀನನ್ನು ಖರೀದಿ ಮಾಡಲು ಆದಾಯದ ಮೂಲವನ್ನು ತಿಳಿಸಿರುವುದಿಲ್ಲ. ಆದ್ದರಿಂದ, ಎದುರುದಾರರು ಅಕ್ರಮ ಆಸ್ತಿಯನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8) ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಅಧಿಕಾರ ದುರುಪಯೋಗ ಪಡಿಸಿಕೊಂಡು, ಕೆ.ಸಿ.ಎಸ್.ಆರ್.ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿ ಸ್ವತ್ತುಗಳನ್ನು ಖರೀದಿಸುವಾಗ ಇಲಾಖೆಯಿಂದ ಅನುಮತಿ ಪಡೆಯದಿರುವುದರಿಂದ ಅವರು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

9) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎದುರುದಾರರು ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು **ಭ್ರಷ್ಟಾಚಾರ ನಿಗ್ರಹ ದಳ,** ಇವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/2/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**